ನಿಜಕ್ಕೂ ದೊಡ್ಡ ಮನೆಯ ಸೊಸೆಯಾದರೂ ಅವ್ವ ಎಲ್ಲರ ಕೈಲಿ ನಲುಗಿದ್ದೇ ಜಾಸ್ತಿ. ಅತ್ತೆ, ಮಾವ, ನಾದಿನಿಯರ ದರ್ಬಾರಿನಲ್ಲಿ ಹೂವಿನಂತಿದ್ದ ವಿಮಲ ಬಳಲಿ ಬೆಂಡಾದಳು. ಮೃದು ಸ್ವಭಾವ, ಹೇಳಿದ್ದಕ್ಕೆಲ್ಲ ತಲೆಯಾಡಿಸುವ ಗುಣಕ್ಕೆ ಭಾರೀ ಬೆಲೆಯನ್ನೇ ತೆತ್ತು ಬಸವಳಿದಳು. ನಿಂಬೆಯ ಬಣ್ಣ, ತಾವರೆಯ ಮೊಗ್ಗಿನಂತಿದ್ದ ಕಣ್ಣುಗಳು, ತುಸುವೇ ಬಾಗಿದ ಗಿಳಿ ಮೂಗು... ಮುದುಡಿದವು. 'ದೇಶಪಾಂಡ್ರ ಸೊಸೆ' ಎಂಬ ಅಭಿದಾನದ ಹೊರತಾಗಿ ದುಡಿಮೆಯೊಂದೇ ಅವಳಿಗೆ ದೊರೆತ ಬಳುವಳಿ. ಸಮಾಧಾನವೆಂದರೆ ಅವರೆಲ್ಲರ ದರ್ಬಾರು ಮುಗಿದ ಮೇಲೆ ಮೂರು ಮಕ್ಕಳಿಂದ ನೆಮ್ಮದಿ ಕಂಡಿದ್ದಳು. ಆರಂಭದಲ್ಲಿ ಜಮದಗ್ನಿಯಂತಿದ್ದ ಮಹಾಬಲ ರಾವ್ ನಿಧಾನವಾಗಿ ತಂಪಾಗಿದ್ದರು. ಸೀರೆ, ಒಡವೆಗಳು ಅವಳ ಬೀರು ತುಂಬಿದವು. "ಪ್ರಾಯದಾಗ ಉಟಗೊಳ್ಳೊ ತೊಟಗೊಳ್ಳೊ ಆಶಾ ಇದ್ದಾಗ ಏನೂ ಸಿಗಲಿಲ್ಲ. ಬರೇ ಮಂದಿಗೆ ಮಾಡೋದ ಆಗಿ ಹೋತು. ಈಗ... ಎಲ್ಲಾ ಬಂದಾವ. ಖರೆ ನಮಗ ಹಾಕ್ಕೊಳ್ಳೊ ಹುರುಪ ಇಲ್ಲಾ" ಎಂದು ಅವ್ವ ಹಲವಾರು ಬಾರಿ ಆಡಿ ತೋರಿಸಿದ್ದಿತ್ತು. "ಈಗರೆ ಸಿಕ್ಕಾವಲಾ ಅಂತ ಸಂತೋಷಪಡು" ಎಂದು ಒಮ್ಮೆ ನಕ್ಕು ದುರುಗುಟ್ಟಿ ನೋಡುತ್ತ ಹೇಳಿದ್ದ ಅಪ್ಪ. ಅವ್ವ ಗಪ್‌ಚಿಪ್.

ಋತುಗಳು, ಸಂವತ್ಸರಗಳು ಬದಲಾದಂತೆಲ್ಲ ಹೂವಿನ ಹಾಸಿಗೆಯ ಮೇಲೆ ಉರುಳುತ್ತಿದ್ದ ಜೀವನ ಚಕ್ರ ತನ್ನ ಗತಿ ಬದಲಿಸುತ್ತಿತ್ತು. ಅಡೆತಡೆಗಳು ಎದುರಾದಂತೆಲ್ಲ ಅಡ್ಡಾದಿಡ್ಡಿಯಾಗಿ ಚಲಿಸುತ್ತಿತ್ತು. ಸುಜಾತ ನಮ್ಮ ಮನೆಗೆ ಹೊಂದಿಕೊಳ್ಳುವದಕ್ಕಿಂತ ಹೆಚ್ಚಾಗಿ ನಾವೇ ಅವಳಿಗೆ ಹೊಂದಿಕೊಂಡೆವು. ಅಪ್ಪ, ಅಕ್ಕ ಸೇರಿಯೇ. ಎರಡೂ ಮೊಮ್ಮಕ್ಕಳು ಅಜ್ಜ ಅಜ್ಜಿಯ ಮಡಿಲಲ್ಲಿ ಆಡಿದರು. "ಒಂದು ಗಂಡು, ಒಂದು ಹೆಣ್ಣು. ತಕರಾರನ ಇಲ್ಲ" ಎಂದು ಅವ್ವ ಅಪ್ಪ ಸಂಭ್ರಮದಿಂದ ಖುಷಿ ಮತ್ತು ಸೌರಭರನ್ನು ಎತ್ತಿ ಮುದ್ದಾಡಿದರು. ನನ್ನ ಔದ್ಯೋಗಿಕ ಕ್ಷೇತ್ರದಲ್ಲೂ ಭಾರೀ ಬದಲಾವಣೆಗಳಾಗಿದ್ದವು. ಹಲವಾರು ಪ್ರತಿಸ್ಪರ್ಧಿಗಳು ಬಂದಿದ್ದರು. ಪ್ರಬಲ ಪೈಪೋಟಿ ಎದುರಿಸಬೇಕಿತ್ತು. ಅದಕ್ಕೆ ನಾನು ಸಿದ್ಧನಾಗಿರಲಿಲ್ಲ. ನಾನು ಸ್ವಲ್ಪ ಅವ್ವನಂತೆಯೇ. ರೂಪ, ಗುಣ ಎರಡರಲ್ಲಿಯೂ. ಮೃದುಹೃದಯಿ. ಹೆಂಗರುಳು. ಯಾರಾದರೂ ಕಷ್ಟ ಎಂದರೆ ಕರಗಿ ನೀರಾಗಿ ಬಿಡುತ್ತಿದ್ದೆ. ಅವರಿಂದ ದುಡ್ಡು ವಸೂಲಿಯ ಮಾತೇ ಇರಲಿಲ್ಲ. ಹೀಗಾಗಿ ನನ್ನ ಸಾಲ ಬೆಳೆಯಿತೇ ವಿನಃ ವ್ಯವಹಾರ ಬೆಳೆಯಲಿಲ್ಲ. ಅದನ್ನು ಬೆಳೆಸುವ ಚಾಕಚಕ್ಯತೆ ನನ್ನಲ್ಲಿರಲಿಲ್ಲ ಬಿಡಿ. ಚಾಕೊಲೇಟ್ ಹುಡುಗನ ಇಮೇಜಿನಿಂದ ಕಳಚಿಕೊಳ್ಳದೇ ಇನ್ನೂ ಹೆಂಡತಿಯ ಜೊತೆ ಸುತ್ತುವ ಖಯಾಲಿನಲ್ಲೇ ಇರುತ್ತಿದ್ದೆ. ಜೊತೆಗೆ ಕೊನೆಯವನೆಂದು ಮುದ್ದು ಹೆಚ್ಚಾಗಿದ್ದರಿಂದ ಒಂದಿಷ್ಟು ಆಲಸಿಯಾಗಿದ್ದೆ. ಹೊಣೆಯರಿತು ಕೆಲಸ ಮಾಡಿ ಹೇಳಿದ ಸಮಯಕ್ಕೆ ಡೆಲಿವರಿ ಕೊಟ್ಟು ಸಾಮಾನು ಪೂರೈಸುವ ಮಾತೇ ಇಲ್ಲ. ನಾಳೆ, ನಾಡಿದ್ದುಗಳು ಸಾಮಾನ್ಯವಾಗಿದ್ದವು. ಇದರಿಂದಾಗಿ ಆರ್ಡರ್‌ಗಳು ಕೈ ತಪ್ಪಿ ಹೋಗುತ್ತಿದ್ದವು. ಇದು ನನ್ನೊಬ್ಬನದೇ ತಪ್ಪಲ್ಲ. ಕೆಲಸಗಾರರೂ ಹಾಗೇ ಇದ್ದರಲ್ಲ. ಏನೇನೋ ಸಬೂಬು ಹೇಳಿ ಕೆಲಸದಿಂದ ತಪ್ಪಿಸಿಕೊಳ್ಳುವದು, ಸಂಬಳದ ದಿನ ಮಾತ್ರ ನಿಯತ್ತಾಗಿ ಬಂದು ಕಣ್ಣೀರು ಸುರಿಸುತ್ತ ನಿಲ್ಲುವದು. ನಾನು ಕರಗಿ ಹೋಗುತ್ತಿದ್ದೆ. ಒಂದಿಬ್ಬರನ್ನು ಬಿಟ್ಟರೆ ಎಲ್ಲ ಇಂಥವರೇ. ಸಂಸಾರದ ಜವಾಬ್ದಾರಿ ನಿಧಾನವಾಗಿ ತಲೆಗೇರುತ್ತಿತ್ತು. ಅಪ್ಪನಿಗೂ ವಯಸ್ಸಾದದ್ದರಿಂದ ಬಿಲ್ ಕಟ್ಟುವದರಿಂದ ಆರಂಭಿಸಿ ಎಲ್ಲ ನನ್ನ ಮೈಮೇಲೆ ಜಾರುತ್ತಿತ್ತು. ಸುಧಾರಿಸಲು ಕಷ್ಟವಾಗುತ್ತಿತ್ತು. ಸುಜಾತಳದ್ದೂ ಇದೇ ಸ್ಥಿತಿ. ಅವ್ವನಿಗೂ ಈಗ ಮೊದಲಿನ ಶಕ್ತಿಯಿಲ್ಲದೇ ಕೆಲಸ ಸಾಗದಾಯಿತು. ಅವ್ವ ಅಪ್ಪನನ್ನು ಭೇಟಿಯಾಗಲು ಬರುವ ನೆಂಟರಿಷ್ಟರು,